ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ದಿನಾಂಕ ೪-೨-೧೯೮೭ ರಂದು ಬೆಳಿಗ್ಗೆ ಸುಮಾರು ೮.೦೦ ಗಂಟೆ ಸಮಯದಲ್ಲಿ ಬಂಗಾರಪ್ಪ, ಲೋಕೋಪಯೋಗಿ ಇಲಾಖೆಯ ಲಾರಿ ಡ್ರೈವರ್ (ಲಾರಿ ನಂ. ಎಂ. ವೈ.ಆರ್. ೩೭೫೭) ಸಂಡೂರು ಕಡೆಯಿಂದ ಬರುತ್ತಿರುವಾಗ ಲಾರಿ ನಂ. ವೈ.ವೈ. ೬೩೪೯ಕ್ಕೆ ನಿರ್ಲಕ್ಷತೆಯಿಂದ ವಾಹನವನ್ನು ನಡೆಸುತ್ತಿದ್ದ ಪರಿಣಾಮವಾಗಿ ಡಿಕ್ಕಿ ಹೊಡೆದು ಹೋಟಲ್‌ನಲ್ಲಿ ನುಗ್ಗಿತು. ಇದರ ಪರಿಣಾಮವಾಗಿ ಇಡ್ಲಿ ಗೌರಮ್ಮ, ಬಸ್ಸಪ್ಪ ಮತ್ತು ಬಸಪ್ಪರವರುಗಳು ಮೃತಪಟ್ಟರು. ಗೌರಮ್ಮ ಮತ್ತು ಹೋಟಲ್‌ನಲ್ಲಿದ್ದ ಮಾಗಪ್ಪನವರಿಗೆ ಗಾಯಗಳಾಗಿವೆ

ಈ ವಿಷಯದಲ್ಲಿ ಕ್ರೈಂ ನಂ. ೧೫-೮೭ರಲ್ಲಿ ಐ.ಪಿ.ಸಿ.ಯ ಕಲಂ ೨೭೯,೩೩೭ ಮತ್ತು ೩೦೪ರ ಅನ್ವಯ ಪ್ರಕರಣವನ್ನು ಲಾರಿ ಡ್ರೈವರ್ ಬಂಗಾರಪ್ಪನವರ ವಿರುದ್ಧ ದಾಖಲು ಮಾಡಿಕೊಳ್ಳಲಾಗಿದೆ. ಮತ್ತು ಪರಿಹಾರದ ವಿಷಯ ಕೇಳಿದ್ದಾರೆ. ಅದನ್ನು ವಿಚಾರಮಾಡಿ ಹೇಳುತ್ತೇನೆ.

(೧೪) ಸುಳ್ಯದಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿದ ೧೩ ಜನರ ಮನೆಗಳಿಗೆ ಬೆಂಕಿಗೆ ಆಹುತಿಯಾಗಿರುವುದು

ಶ್ರೀ ಕೆ. ಕುಶಾಲ(ಸುಳ್ಯ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ತಾಲ್ಲೂಕಿನ ಸುಳ್ಯ ಕಸಬ ಗ್ರಾಮದ ಪರಿಶಿಷ್ಟಜಾತಿ ನಿವಾಸಿಗಳ ಸುಮಾರು ೨೫ ಕುಟುಂಬದವರ ಪೈಕಿ ೧೩ ಕುಟುಂಬದ ಮನೆಗಳು ೮.೨-೮೭ ರಂದು ೧-೩೧ ಗಂಟೆ ಹಗಲು ಹೊತ್ತು ಆಕಸ್ಮಿಕ ಬೆಂಕಿ ಅಪಘಾತದಲ್ಲಿ ಸಂಪೂರ್ಣ ಸುಟ್ಟು ಹೋಗಿವೆ. ಈ ೧೩ ಕುಟುಂಬದ ಜನರ ಮೈಮೇಲಿನ ಬಟ್ಟೆಗಳು ಮಾತ್ರ ಉಳಿದಿವೆ. ಇತರ ಎಲ್ಲಾ ಸೊತ್ತುಗಳು ಸುಟ್ಟುಹೋಗಿ ಅಂದಾಜು ೧.೫೦ ಲಕ್ಷ ರೂಪಾಯಿಗಳಷ್ಟು ನಷ್ಟ ಉಂಟಾಗಿದೆ. ಸದರಿ ೨೫ ಕುಟುಂಬದವರಿಗೆ ಈ ತನಕ ಯಾವುದೇ ಸರಕಾರಿ ನಿವೇಶನ ಸರಕಾರದಿಂದ ಮಂಜೂರಾಗಿರುವುದಿಲ್ಲ. ನಿವೇಶನ ಅಳತೆ ಆಗಿ ಮಂಜೂರಾತಿಗೆ ಕಳಿದ ೬ ತಿಂಗಳುಗಳಿಂದ ಬಾಕಿ ಇವೆ. ಈ ಮನೆ ಸುಟ್ಟ ಕುಟುಂಬಗಳಿಗೆ ತಾತ್ಕಾಲಿಕ ೩೦೦-೦೦ ರೂಪಾಯಿಗಳು ಪರಿಹಾರ ಮಾತ್ರ ದೊರೆಯಲು ಸಾಧ್ಯ.

ಇವರಿಗೆ ಸರಕಾರದಿಂದ ವಿಶೇಷವಾಗಿ ಹೆಚ್ಚುವರಿ ಪರಿಹಾರ ಧನವನ್ನು ನೀಡಬೇಕಾಗಿಯೂ ಮತ್ತು ಸದ್ರಿ ಇಲ್ಲಿಯ ನಿವಾಸಿಗಳಾದ ೨೫ ಕುಟುಂಬಗಳಿಗೆ ಸರಕಾರೀ ನಿವೇಶನ ಮಂಜೂರಾತಿಯನ್ನು ಕಂದಾಯ ಇಲಾಖೆ ಕೂಡಲೇ ನೀಡಿ, ಇವರಿಗೆ ತಕ್ಷಣ ನಿವೇಶನದಲ್ಲಿ ಸರಕಾರಿ ಹುಡ್ಕೋ ಯೋಜನೆ ಮನೆ ಹರಿಜನ ಯೋಜನೆ, ಮನೆಯನ್ನಾಗಲೀ, ಇಂದಿರಾಪ್ರಾಜ್ ಮನೆಯನ್ನಾಗಲೀ ಮಂಜೂರಾತಿ ನೀಡುವಂತೆ, ಮನೆಯು ಕೂಡಲೇ ನಿರ್ಮಾಣವಾಗುವಂತೆ ಕ್ರಮ ಕೈಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ. ದಿನಾಂಕ ೮ನೇ ಫೆಬ್ರುವರಿ ೧೯೮೭ರಂದು ಮಧ್ಯಾಹ್ನ ೧ ಗಂಟೆಯ ಸಮಯದಲ್ಲಿ ಸುಳ್ಯ ತಾಲ್ಲೂಕು ಕೊಪ್ಪಳ ಗ್ರಾಮದಲ್ಲಿ ಬೆಂಕಿ ಬಿದ್ದ ಕಾರಣ ೧೫ ಸಂಸಾರಗಳಿಗೆ ಸೇರಿದ ೧೮ ಗುಡಿಸಲುಗಳು ಸುಟ್ಟುಹೋಗಿ ಒಟ್ಟು ೪೯,೨೦೮ ರೂಪಾಯಿ ಬೆಲೆ ಬಾಳುವ ವಸ್ತುಗಳು ಸುಟ್ಟು ಹೋಗಿ ನಷ್ಟವಾಗಿವೆ. ಈ ಅನಾಹುತದಿಂದ ಒಟ್ಟು ೫೭ ಜನರು ನಿರಾಶ್ರಿತರಾಗಿದ್ದಾರೆ. ಸಾರ್ವಜನಿಕರು, ಪೋಲೀಸಿನವರು ಪಾದಯಾತ್ರೆ ಮಾಡಿ ಸುಮಾರು ೧೩,೦೦೦ ರೂಪಾಯಿಗಳನ್ನು ಸಂಗ್ರಹ ಮಾಡಿ ಇವರಿಗೆ ತಾತ್ಕಾಲಿಕ ಪೆಡ್ಡುಗಳನ್ನು ಒದಗಿಸಿರುತ್ತಾರೆ.

(೧೫) ಬಳ್ಳಾರಿ ಡಿವಿಜನಿನ ಸಿಂಧನೂರು ಗಂಗಾವತಿ ಮತ್ತು ಸಿರಗುಪ್ಪದಲ್ಲಿರುವ ಹಾಲು ಸರಬರಾಜು ಮಾಡುವವರಿಗೆ ಹಣ ಪಾವತಿಯಾಗದಿರುವುದು

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮಿಲ್ಕ್ ಫೆಡರೇಷನ್ ಬಳ್ಳಾರಿ ಭಾಗಕ್ಕೆ ಸೇರಿದ ಸಿಂಧನೂರು, ಗಂಗಾವತಿ, ಶಿರಗುಪ್ಪ ಮತ್ತು ಬಳ್ಳಾರಿ ತಾಲ್ಲೂಕುಗಳ ಹಾಲು ಸರಬರಾಜು ಮಾಡಿದ ಸಾವಿರಾರು ಜನರಿಗೆ ಸುಮಾರು ಎರಡೂವರೆ ತಿಂಗಳಿಂದ ಹಣ ಸಂದಾಯವಾಗಿರುವುದಿಲ್ಲ. ಈ ಹಣ ಸುಮಾರು ೧೫ ಲಕ್ಷದಷ್ಟಾಗಬಹುದು. ಇದರಿಂದ ಸರಬರಾಜುದಾರರಿಗೆ ಬಹಳ ಕಷ್ಟವಾಗಿದೆ. ಜನರಲ್ ಮ್ಯಾನೇಜರ್ ಶ್ರೀ ಸುಬ್ಬಸ್ವಾಮಿಯನ್ನು ಕೇಳಿದರೆ ಸೂಕ್ತ ಉತ್ತರ ಇಲ್ಲ. ಆದ್ದರಿಂದ ತಕ್ಷಣ ಹಣ ಪಾವತಿ ಮಾಡಿಸತಕ್ಕದ್ದು. ಈ ಆಲಸ್ಯಕ್ಕೆ ಕಾರಣರಾದವರ ಮೇಲೆ ಷೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು. ಸಂಗ್ರಹಿಸಿದ ಹಾಲು ಚಿಲ್ಲಿಂಗ್ ಆಗಿಲ್ಲದೆ ಕೆಟ್ಟಿದೆ ಎಂದು

ದಾರಿಯುದ್ದಕ್ಕೂ ಒಂದೆರಡು ದಿನ ಚಿಲ್ಲಿ ಹೋಗಿದ್ದಕ್ಕೆ ಕಾರಣವೇನು. ಈ ರೀತಿ ಮಾಡುವುದು ಕೆ.ಎಂ.ಎಫ್.ಗೆ ನಷ್ಟವಲ್ಲದೆ. ಇದನ್ನು ನಿಲ್ಲಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಸಂಬಂಧಪಟ್ಟ ಮಂತ್ರಿಯವರ ಗಮನಕ್ಕೆ ತರುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶು ಸಂಗೋಪನೆ ಮತ್ತು ವಿಾನುಗಾರಿಕೆ ಸಚಿವರು).— ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ :

ಇದೇ ಹಾಲಿನ ಸುಗ್ಗಿಯಲ್ಲಿ ನಿರೀಕ್ಷೆಗೂ ಮೀರಿ ಹಾಲು ಸಂಗ್ರಹವಾಗುತ್ತಿರುವುದರಿಂದ, ಮಾರಾಟವಾಗದೆ ಉಳಿದಿರುವ ಹಾಲನ್ನು ಹಾಲಿನ ಉತ್ಪನ್ನಗಳಾಗಿ ಪರಿವರ್ತಿಸಿ ಭಾರತೀಯ ಹೈನುಗಾರಿಕೆ ನಿಗಮಕ್ಕೆ ಹಾಗೂ ಸಾರ್ವಜನಿಕರಿಗೆ ಮಾರಾಟ ಮಾಡಲಾಗುತ್ತಿದೆ. ಇದರಲ್ಲಿ ಸಾರ್ವಜನಿಕರಿಂದ ಮಾತ್ರ ಮಾರಾಟ ಮಾಡಿದ ಕೂಡಲೇ ಹಣ ಪಡೆಯಲಾಗುತ್ತಿದೆ. ಆದರೆ ಭಾರತೀಯ ಹೈನುಗಾರಿಕೆ ನಿಗಮಕ್ಕೆ ಮಾರಾಟ ಮಾಡಿರುವ ಹಾಲಿನ ಪೂಡಿಯ ಹಣವನ್ನು ಅವರಿಂದ ಪೂರ್ಣವಾಗಿ ಬಂದಿರುವುದಿಲ್ಲ. ದಿನಾಂಕ ೬ನೇ ಫೆಬ್ರುವರಿ ೧೯೮೭ರಂದು ದಿನಾಂಕ ೩೧ನೇ ಡಿಸೆಂಬರ್ ೧೯೮೭ರ ವರೆಗೆ, ಬಳ್ಳಾರಿ ಡೈರಿಯು ಹಾಲು ಉತ್ಪಾದಕರಿಗೆ ಅವರು ಸರಬರಾಜು ಮಾಡಿದ ಹಾಲಿನ ಪೂರ್ಣ ಹಣವನ್ನು (೧೨ ಲಕ್ಷ ರೂ.ಗಳನ್ನು) ಪಾವತಿ ಮಾಡಲಾಗಿದೆ. ದಿನಾಂಕ ೧ನೇ ಜನವರಿ ೧೯೮೭ರಿಂದ ಇದುವರೆಗೆ ಬಳ್ಳಾರಿ ಡೈರಿಗೆ ಹಾಲು ಸರಬರಾಜು ಮಾಡಿರುವ ಸರಬರಾಜುದಾರರಿಗೆ ಸುಮಾರು ೮ ಲಕ್ಷ ರೂ.ಗಳಷ್ಟು ಹಣವನ್ನು ಇನ್ನೂ ಪಾವತಿ ಮಾಡಬೇಕಾಗಿದೆ. ಇದನ್ನು ಆದಷ್ಟು ಜಾಗ್ರತೆಯಾಗಿ ಪಾವತಿ ಮಾಡಲು ಅವಶ್ಯವಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳಲಾಗುತ್ತಿದೆ.

ಬಳ್ಳಾರಿ ಡೈರಿಯ ಅಧೀನದಲ್ಲಿ ಬರುವ ಶೀತಲೀಕರಣ ಕೇಂದ್ರದಲ್ಲಿ ವಿದ್ಯುತ್ ಕೊರತೆಯಿಂದಾಗಿ ಶೇಖರಿಸಿದ ಹಾಲಿನಲ್ಲಿ ಭಾಗಶಃ ಪ್ರಮಾಣದ ಹಾಲನ್ನು ಶೈತ್ಯಗೊಳಿಸಲಾಗದೆ ಬಳ್ಳಾರಿ ಡೈರಿಗೆ ಸಾಗಿಸಿ ಸಂಸ್ಕರಿಸಲಾಗಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಶೇಖರಿಸಿದ ಭಾಗಶಃ ಹಾಲು ಹುಳಿಯಾಗಿದ್ದುದರಿಂದ ಹಾಲಿನಿಂದ ಬೆಣ್ಣೆ ತೆಗೆದು ನಂತರ ಉಳಿದ ಹುಳಿ ಹಾಲನ್ನು ಬಳ್ಳಾರಿ ಪುರಸಭಾ ಗಡಿಯಿಂದಾಚೆಗೆ ಜಿಲ್ಲಲಾಗಿದೆ. ಈ ಹಾಲನ್ನು ಯಾವುದೇ ರೀತಿಯಲ್ಲಿ ಉಪಯೋಗಿಸಲು ಸಾಧ್ಯವಾಗದ ಪ್ರಯುಕ್ತ ಜಿಲ್ಲಲಾಗಿದೆ. ಆದರೆ ಉತ್ಪನ್ನ ಮಟ್ಟದ ಹಾಲನ್ನು ಯಾವುದೇ ರೀತಿಯಲ್ಲಿ ಯಾವಾಗಲೂ ಜಿಲ್ಲಲಾಗಿಲ್ಲ. ಆದುದರಿಂದ, ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಶೇಖರಿಸಿದ ಭಾಗಶಃ ಹುಳಿಯಾದ ಹಾಲಿನಲ್ಲಿನ ಬೆಣ್ಣೆಯಂಶಕ್ಕೆ ಮಾತ್ರ. ಆಯಾ ಹಾಲು ಉತ್ಪಾದಕರ ಸಂಘಗಳಿಗೆ ಹಣ ಪಾವತಿ ಮಾಡಿರುವುದರಿಂದ, ಕೆ. ಎಂ. ಎಫ್.ಗೆ ಯಾವುದೇ ನಷ್ಟ ಸಂಭವಿಸಿಲ್ಲ.

(೧೬) ಕರ್ನಾಟಕ ವಿಶ್ವವಿದ್ಯಾಲಯದ ತೋಟಗಾರಿಕೆ ವಿಭಾಗದಲ್ಲಿರುವ ಮಾಲಿಗಳನ್ನು ಖಾಯಂಗೊಳಿಸುವ ಬಗ್ಗೆ

† ಶ್ರೀ ಬಾಬುರೆಡ್ಡಿ ತುಂಗಳ್.—ಮಾನ್ಯ ಅಧ್ಯಕ್ಷರೆ, ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ತೋಟಗಾರಿಕೆ ವಿಭಾಗದಲ್ಲಿ ಸುಮಾರು ೮೦ ಜನ ಮಾಲಿಗಳು ಸತತವಾಗಿ ೧೦-೨೦ ವರ್ಷಗಳಿಂದಲೂ ದಿನಗೂಲಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮನ್ನು ಮಾಲಿಗಳ ಅಥವಾ ಗಾರ್ಡನರ್ ಹುದ್ದೆಗಳಲ್ಲಿ ಖಾಯಂಗೊಳಿಸಬೇಕೆಂದು ಕಳೆದ ೪ ತಿಂಗಳಿಂದಲೂ ವಿ. ವಿ. ಆವರಣದಲ್ಲಿ ಮುಷ್ಕರ ಮಾಡಿದ್ದಾರೆ. ಶಿಕ್ಷಣ ಸಚಿವರು ಮತ್ತು ಕಾರ್ಮಿಕ ಸಚಿವರು ಇತ್ತೀಚೆಗೆ ಕರ್ನಾಟಕ ವಿ. ವಿ. ಆವರಣಕ್ಕೆ ಭೇಟಿ ನೀಡಿದಾಗ ಅವರೆದುರು ಈ ಕಾರ್ಮಿಕರು ತೀವ್ರ ಮತ ಪ್ರದರ್ಶನ ಮಾಡಿದ್ದುಂಟು. ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಇಂತಹದೇ ಕೆಲಸವನ್ನು ಮಾಡುತ್ತಿರುವವರನ್ನು ಗಾರ್ಡನರ್ ಅಥವಾ ಮಾಲಿಗಳ ಹುದ್ದೆಗಳಲ್ಲಿ ಖಾಯಂಗೊಳಿಸಲಾಗಿದೆ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿರುವ ಈ ದಿನಗೂಲಿ ಕಾರ್ಮಿಕರನ್ನು ಖಾಯಂ ಮಾಡುವಂತೆ ವಿಶ್ವವಿದ್ಯಾಲಯ ಸಿಂಡಿಕೇಟ್ ದಿನಾಂಕ ೨೩ನೇ ಸೆಪ್ಟೆಂಬರ್ ೧೯೮೦ ರಂದು ಒಂದು ಗೊತ್ತುವಳಿಯನ್ನೂ ಸಹ ಸ್ವೀಕರಿಸಿದೆ. ಆ ಗೊತ್ತುವಳಿಯ ಕ್ರಮ ಸಂಖ್ಯೆ ೮೫. ಸಿಂಡಿಕೇಟ್ ಮಾನ್ಯ ನೀಡಿ ಈ ಗೊತ್ತುವಳಿ ರಾಜ್ಯಸರ್ಕಾರದ ಆರ್ಥಿಕ ಇಲಾಖೆಯಿಂದ ಈವರೆವಿಗೂ ಹೊರಬಂದಿಲ್ಲವೆಂಬುದನ್ನು ಇಲ್ಲಿ ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ಈ ೮೦ ಜನರನ್ನು ಖಾಯಂ ಮಾಡಿದಲ್ಲಿ ಆದರಿಂದ ಕ. ವಿ. ವಿ. ಗೆ ಪ್ರತಿ ವರ್ಷಕ್ಕೆ ೧,೪೨,೨೬೦

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.